RAVIPRAKASH TIPPANNA AVIN
Digitally signed by RAVIPRAKASH TIPPANNA AVIN
Date: 2026.08.10 15:32:28 +0530

# 3ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ

## ಸಿ.ಸಿ. ಸಂಖ್ಯೆಃ 359/2020

## ದಿನಾಂಕಃ 07ನೇ ಆಗಸ್ಟ್ 2026

ಉಪಸ್ಥಿತರುಃ ಶ್ರೀ ರವಿಪ್ರಕಾಶ್ ಟಿ ಆವಿನ್, ಬಿ.ಬಿ.ಎ., ಎಲ್.ಎಲ್.ಎಮ್,
3ನೇ ಅಧಿಕ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಕನಕಪುರ.

**ಫಿರ್ಯಾದುದಾರರು : ಸಾತನೂರು ಪೊಲೀಸ್ ಠಾಣೆ**

**(ಸರ್ಕಾರಿ ಸಹಾಯಕ ಅಭಿಯೋಜಕರವರಿಂದ)**

**ವಿರುದ್ಧ**

**ಆರೋಪಿತರು** : ರವಿ ಹೆಚ್. ಟಿ
ಬಿನ್ ಲೇಟ್ ತೂರಯ್ಯ,
ವಯಸ್ಸು 31 ವರ್ಷಗಳು,
ವಾಸಃ ಹೊಸಕಬ್ಬಾಳು ಗ್ರಾಮ,
ಸಾತನೂರು ಹೋಬಳಿ,
ಕನಕಪುರ ತಾಲ್ಲೂಕು,
ರಾಮನಗರ ಜಿಲ್ಲೆ.

**(ಶ್ರೀ ಎಸ್.ಡಿ., ವಕೀಲರವರಿಂದ )**

| | | |
|---|---|---|
| 1 | ಘಟನೆ ನಡೆದ ದಿನಾಂಕ | : 15.02.2017 |
| 2 | ಘಟನೆ ವರದಿ ಮಾಡಿದ ದಿನಾಂಕ | : 15.02.2017 |
| 3 | ಪಿರ್ಯಾದುದಾರರ ಹೆಸರು | : ಸುಶ್ಮೀತಾ |

| | | |
|---|---|---|
| 4 | ವಿಚಾರಣೆ ಪ್ರಾರಂಭವಾದ ದಿನಾಂಕ | : 15.07.2026 |
| 5 | ವಿಚಾರಣೆ ಮುಕ್ತಾಯವಾದ ದಿನಾಂಕ | : 15.07.2026 |
| 6 | ಆರೋಪಿಸಲ್ಪಟ್ಟ ಅಪರಾಧಗಳು | : ಭಾರತೀಯ ದಂಡ ಸಂಹಿತೆಯ ಕಲಂ 341, 354(ಡಿ), 506, 509 ಐಪಿಸಿ ಮತ್ತು 67 ಐಟಿ ಆಕ್ಟ್ |
| 7 | ತೀರ್ಪು ಉದ್ಘೋಷಣೆ ಮಾಡಿದ ದಿನಾಂಕ | : 07.08.2026 |
| 8 | ನ್ಯಾಯಾಧೀಶರ ಅಭಿಪ್ರಾಯ | : ಆರೋಪಿಯನ್ನು ಅಪರಾಧಗಳಿಂದ ದೋಷ ಮುಕ್ತಗೊಳಿಸಿದೆ. |

**:ತೀರ್ಪು::**

ಪೊಲೀಸ್ ಸಬ್ ಇನ್ಸ್ ಪೆಕ್ಟರ್, ಸಾತನೂರು ಪೊಲೀಸ್ ಠಾಣೆ, ಇವರು ಆರೋಪಿತನ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ 341, 354(ಡಿ), 506, 509 ಐಪಿಸಿ ಮತ್ತು 67 ಐಟಿ ಆಕ್ಟ್ ರ ಅಪರಾಧಗಳಿಗೆ ದೋಷಾರೋಪಣ ಪತ್ರ ಸಲ್ಲಿಸಿರುತ್ತಾರೆ.

**2. ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆ :**

ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ, ಸಾತನೂರು ಪೊಲೀಸ್ ಠಾಣಾ ಸರಹದ್ದು, ಹೊಸಕಬ್ಬಾಳು ಗ್ರಾಮದಲ್ಲಿ ದಿನಾಂಕ.15.02.2017 ಕ್ಕೆ ಸುಮಾರು ಮೂರು ತಿಂಗಳ ಹಿಂದೆ ಆರೋಪಿಯು ಮೊಬೈಲ್ ಸಂಖ್ಯೆಃ 9743799158 ಹಾಗೂ 9663807700 ರ ಮೂಲಕ ಚಾಸಾ-1/ ಸುಶ್ಮಿತಾ ರವರಿಗೆ ಕರೆಗಳನ್ನು ಮಾಡಿ ಹೆದರಿಸಿ ಅಶ್ಲೀಲ ಪದಗಳನ್ನು ಬಳಸಿ ಮೆಸೇಜ್ ಮಾಡಿ

ವ್ಯಾಟ್ಸಪ್, ಪೇಸ್ ಬುಕ್ ಮುಖಾಂತರ ಸಮಾಜಿಕ ಜಾಲ ತಾಣಗಳಲ್ಲಿ ನಿನ್ನ ಮರ್ಯಾದೆಯನ್ನು ಹರಾಜು ಹಾಕುತ್ತೇನೆಂದು ಬೆದರಿಸಿ ನೀನು ಮದುವೆ ಮಾಡಿಕೊಡಿದ್ದರು ನಿನ್ನನ್ನು ನಾನು ಬಿಡುವುದಿಲ್ಲ ಹೊತ್ತುಕೊಂಡು ಹೋಗಿ ಅತ್ಯಾಚಾರ ಮಾಡುತ್ತೇನೆಂದು ಬೆದರಿಕೆ ಹಾಕಿ, ನೀನು ನನಗೆ ಮೂರನೆ ಹೆಂಡತಿಯಾಗು ಇಲ್ಲದಿದ್ದರೇ ನಿನ್ನ ಮೇಲೆ ಆಸಿಡ್ ಹಾಕಿ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿ, ನಿನ್ನನ ಗಂಡನನ್ನು ಕೊಲೆ ಮಾಡುತ್ತೇನೆಂದು ಬೆದರಿಕೆಯನ್ನು ಹಾಕಿ ಚಾಸಾ-1/ಸುಶ್ಮೀತಾ ರವರು ದಾರಿಯಲ್ಲಿ ಬರುತ್ತಿರುವಾಗ ತಡೆದು ಹಿಂಸೆಯನ್ನು ನೀಡುತ್ತಿರುತ್ತಾನೆಂದು ಆರೋಪಿತನ ವಿರುದ್ದ ಭಾರತೀಯ ದಂಡ ಸಂಹಿತೆಯ ಕಲಂ 341, 354(ಡಿ), 506, 509 ಮತ್ತು 67 ಐಟಿ ಆಕ್ಟ್ ರ ಅಪರಾಧಗಳಿಗೆ ದೋಷಾರೋಪಣ ಪತ್ರ ಸಲ್ಲಿಸಿರುತ್ತಾರೆ.

**3.** ಆರೋಪಿತನು ಜಾಮೀನಿನ ಮೇಲೆ ಬಿಡುಗಡೆ ಆಗಿದ್ದು, ಅವರಿಗೆ ದಂಡ ಪ್ರಕ್ರಿಯ ಸಂಹಿತೆ ಕಲಂ 207 ರಡಿಯಲ್ಲಿ ಅಭಿಯೋಜನೆಯ ಪರ ದಾಖಲೆಗಳನ್ನು ಒದಗಿಸಲಾಗಿರುತ್ತದೆ.

**4.** ಭಾರತೀಯ ದಂಡ ಸಂಹಿತೆಯ ಕಲಂ 341, 354(ಡಿ), 506, 509 ಮತ್ತು 67 ಐಟಿ ಆಕ್ಟ್ ರ ಅಪರಾಧಗಳಿಗೆ ದೋಷಾರೋಪಣ ಪತ್ರ ಸಲ್ಲಿಸಿರುತ್ತಾರೆ. ಅಪರಾಧಗಳಿಗೆ ದೋಷಾರೋಪಣೆಯನ್ನು ರಚಿಸಿ, ಆರೋಪಿತನಿಗೆ ಓದಿ ಹೇಳಿದ್ದು ಅವನು ಅದನ್ನು ಅಲ್ಲಗಳೆದಿದ್ದರಿಂದ ವಿಚಾರಣೆಗೆ ಮುಂದೂಡಲಾಯಿತು.

**5.** ಅಭಿಯೋಜನೆಯು ದೋಷಾರೋಪಣೆ ಪಟ್ಟಿಯ 08 ಸಾಕ್ಷಿದಾರರಲ್ಲಿ, ಒಬ್ಬ ಸಾಕ್ಷಿದಾರರನ್ನು ಮಾತ್ರ ಪ್ರಾಸಾ-1 ಎಂಬುದಾಗಿ ವಿಚಾರಣೆಗೊಳಪಡಿಸಿರುತ್ತದೆ.

ವಿಚಾರಣೆ ಮಾಡಿ 2 ದಾಖಲೆಗಳನ್ನು ನಿಶಾನೆ.ಪಿ-1 ಮತ್ತು ನಿಶಾನೆ.ಪಿ 2 ಎಂದು ಗುರುತಿಸಲಾಗಿದೆ.

**6.** ಅಭಿಯೋಜನೆಯ ಪಕ್ಷದ ಪ್ರಕರಣಕ್ಕೆ ಪೂರಕವಾಗಿ ಪ್ರಾಸಾ-1 ರವರು ನುಡಿಯದೇ ಪ್ರತಿಕೂಲ ಸಾಕ್ಷಿದಾರರಾಗಿದ್ದು, ಆರೋಪಿತನ ವಿರುದ್ಧ ಯಾವುದೇ ಸಾಕ್ಷ್ಯವು ದೊರೆಯದಿದ್ದ ಕಾರಣ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರಡಿಯಲ್ಲಿ ದಾಖಲಿಸುವ ಹೇಳಿಕೆಯನ್ನು ವಿನಾಯಿತಿ ನೀಡಲಾಯಿತು.

**7.** ವಾದವನ್ನು ಆಲಿಸಲಾಯಿತು, ದಾಖಲೆಗಳನ್ನು ಪರಿಶೀಲಿಸಲಾಯಿತು.

**8.** ಅಭಿಯೋಜಕರು ಹಾಜರು ಪಡಿಸಿದ ಸಾಕ್ಷ್ಯಗಳ ಹೇಳಿಕೆಗಳನ್ನು, ನಿಶಾನೆಯಾಗಿ ಗುರುತಿಸಿಕೊಂಡಿರುವ ದಾಖಲಾತಿಗಳನ್ನು ಮತ್ತು ಉಭಯ ವಕೀಲರು ಮಂಡಿಸಿದ ವಾದ ವಿವಾದದ ಮೇರೆಗೆ ಪರಿಗಣನೆಗೆ ಉದ್ಭವಿಸುವ ಅಂಶಗಳು ಯಾವುವೆಂದರೆ;

> **ಅಂಶ 1.** ಸಾತನೂರು ಪೊಲೀಸ್ ಠಾಣಾ ವ್ಯಾಪ್ತಿಯ ಸರಹದ್ದು, ಹೊಸಕಬ್ಬಾಳು ಗ್ರಾಮದಲ್ಲಿ, ದಿನಾಂಕ.15.02.2017 ಕ್ಕೆ ಹಿಂದೆ ಸುಮಾರು ಮೂರು ತಿಂಗಳ ಹಿಂದೆ ಆರೋಪಿಯ ಮೊಬೈಲ್ ಸಂಖ್ಯೆಃ 9743799158 ಹಾಗೂ 9663807700 ರ ಮೂಲಕ ಚಾಸಾ-1/ಸುಷ್ಮಿತಾ ರವರಿಗೆ ಕರೆಗಳನ್ನು ಮಾಡಿ ಹೆದರಿಸುತಿದ್ದು ಹಾಗೂ ಅಶ್ಲೀಲ ಪದಗಳನ್ನು ಬಳಸಿ ಮೆಸೇಜ್ ಮಾಡುವ ಮುಖಾಂತರ ಹಾಗೂ ವ್ಯಾಟ್ಸಾಪ್ ಮುಖಾಂತರ ಪೇಸ್ ಬುಕ್ ಮುಖಾಂತರ ಸಾಮಾಜಿಕ ಜಾಲ ತಾಣಗಳಲ್ಲಿ ನಿನ್ನ

ಮರ್ಯಾದೆಯನ್ನು ಹರಾಜು ಹಾಕುತ್ತೇನೆಂದು ಬೆದರಿಕೆಯನ್ನು ಹಾಕಿದ್ದು, ಆ ಮೂಲಕ ಮಾಹಿತಿ ತಂತ್ರಜ್ಞಾನ ಕಾಯಿದ ಕಲಂ.*67* ರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ *?*

**ಅಂಶ 2.** ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ಚಾಸಾ-1/ಸುಷ್ಮಿತಾ ರವರಿಗೆ ಕೆಗಳನ್ನು ಮಾಡಿ ಬೆದರಿಸಿ ನೀನ್ನನ್ನು ನಾನು ಬಿಡುವುದಿಲ್ಲ ಹೊತ್ತುಕೊಂಡು ಹೋಗಿ ಅತ್ಯಾಚಾರ ಮಾಡುತ್ತೇನೆಂದು ಬೆದರಿಕೆಯನ್ನು ಹಾಕಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 354(ಡಿ) ರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ ?

**ಅಂಶ 3.** ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ನೀವು ಚಾಸಾ-1/ಸುಷ್ಮಿತಾ ರವರಿಗೆ ನೀನು ನನಗೆ ಮೂರನೇ ಹೆಂಡತಿಯಾಗು ಇಲ್ಲದಿದ್ದರೇ ನಿನ್ನ ಮೇಲೆ ಆಸೀಡ್ ಹಾಕಿ ಕೊಲೆ ಮಾಡುವುದಾಗಿ ಹಾಕಿ ನಿನ್ನ ಗಂಡನನ್ನು ಕೊಲೆ ಮಾಡುತ್ತೇನೆಂದು ಕೊಲೆ ಬೆದರಿಕೆಯನ್ನು ಹಾಕಿದ್ದು, ಆ

ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 506 ರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ ?

**ಅಂಶ 4.** ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ನೀವು ಚಾಸಾ-1/ಸುಷ್ಮಿತಾ ರವರು ದಾರಿಯಲ್ಲಿ ಬರುತ್ತಿರುವಾಗ ತಡೆದು ಹಿಂಸೆಯನ್ನು ನೀಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 341 ರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ ?

**ಅಂಶ 5.** ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ನೀವು ಚಾಸಾ-1/ಸುಷ್ಮಿತಾ ರವರು ದಾರಿಯಲ್ಲಿ ಬರುತ್ತಿರುವಾಗ ತಡೆದು ಹಿಂಸಿಸಿ, ಅಶ್ಲೀಲವಾಗಿ ಕೈ ಸನ್ನೆ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 509 ರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ ?

**ಅಂಶ 6.** ಯಾವ ಆದೇಶ ?

**9.** ಈ ಮೇಲ್ಕಂಡ ಅಂಶಗಳಿಗೆ ಈ ನ್ಯಾಯಾಲಯದ ಉತ್ತರ ಈ ಕೆಳಗಿನಂತಿದೆ:

**ಅಂಶ-1 : ನಕಾರಾತ್ಮಕವಾಗಿ**

**ಅಂಶ-2 : ನಕಾರಾತ್ಮಕವಾಗಿ**

**ಅಂಶ-3 : ನಕಾರಾತ್ಮಕವಾಗಿ**

**ಅಂಶ-4 : ನಕಾರಾತ್ಮಕವಾಗಿ**

**ಅಂಶ-5 : ನಕಾರಾತ್ಮಕವಾಗಿ**

**ಅಂಶ-6 : ಅಂತಿಮ ಆದೇಶ**

## ಕಾರಣಗಳು

**10. ಅಂಶ-1 ರಿಂದ 5 :** ಸಂಗತಿಯ ಪುನರಾವರ್ತನೆಯನ್ನು ತಪ್ಪಿಸಲು ಹಾಗೂ ಈ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಸದರಿ ಅಂಶಗಳನ್ನು ಒಟ್ಟಿಗೆ ಚರ್ಚಿಸಲಾಗಿದೆ.

**11.** ಅಭಿಯೋಜನೆಯು ಪ್ರಕರಣವನ್ನು ರುಜುವಾತು ಪಡಿಸಲು ತನ್ನ ಪರವಾಗಿ ಒಬ್ಬ ಸಾಕ್ಷಿದಾರರನ್ನು ಪ್ರಾಸಾ-1 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ.

**12.** ಪ್ರಾ.ಸಾ-1 ಸುಶ್ಮಿತಾ ಪಿರ್ಯಾದಿ ಸಾಕ್ಷಿದಾರರಾಗಿರುತ್ತಾರೆ. ತಮ್ಮ ಮುಖ್ಯ ವಿಚಾರಣೆಯಲ್ಲಿ, ಅಭಿಯೋಜನೆಗೆ ಪೂರಕವಾಗಿ ಯಾವುದೇ ಸಾಕ್ಷ್ಯವನ್ನು ನುಡಿದಿರುವುದಿಲ್ಲ ಮತ್ತು ನಿಪಿ-1 ದೂರು, ನಿಪಿ-2 ಪಂಚನಾಮೆಯ ಅಂಶಗಳನ್ನು ಅಲ್ಲಗಳೆದಿರುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಲು ಕೇಳಿಕೊಂಡು,

ಪಾಟೀ ಸವಾಲಿಗೆ ಒಳ ಪಡಿಸಿರುತ್ತಾರೆ. ಪಾಟೀ ಸವಾಲಿನಲ್ಲಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಗಲಾಟೆಯ ಬಗ್ಗೆ ಕೇಳಿರುತ್ತಾರೆ, ಅದಕ್ಕೆ ಸದರಿ ಸಾಕ್ಷಿದಾರರು ತಮ್ಮ ಹೇಳಿಕೆಯನ್ನು ಅಲ್ಲಗಳೆದಿರುತ್ತಾರೆ. ಆದ್ದರಿಂದ ಸದರಿ ಸಾಕ್ಷಿದಾರರಿಂದ ಅಭಿಯೋಜನೆಗೆ ಯಾವುದೇ ಅನುಕೂಲವಾಗಿರುವುದಿಲ್ಲ.

**13.** ಈ ಸಾಕ್ಷಿದಾರರ ವಿಚಾರಣೆ ಆದ ನಂತರ ಮಾನ್ಯ ಸರ್ಕಾರಿ ಅಭಿಯೋಜಕರು ದೋಷಾರೋಪಣೆ ಪಟ್ಟಿಯಲ್ಲಿ ಹೆಸರಿಸಲಾದ ಉಳಿದ ಸಾಕ್ಷಿ ದಾರರಿಗೆ ಸಮನ್ಸ್ ಹೊರಡಿಸಲು ಕೋರಿಕೊಂಡಿರುತ್ತಾರೆ. ಆದರೆ ಈ ಪ್ರಕರಣದ ಫಿರ್ಯಾದುದಾರರು ಮತ್ತು ಗಾಯಾಳುಗಳು ಸ್ವತಃ ಆರೋಪಿತನ ವಿರುದ್ಧ ಯಾವುದೇ ಸಾಕ್ಷ್ಯವನ್ನು ನುಡಿಯದೆ ಇದ್ದುದರಿಂದ ಉಳಿದ ಸಾಕ್ಷಿದಾರರ ವಿಚಾರಣೆ ಮಾಡಿದರೂ ಸಹ ಅಭಿಯೋಜನೆಗೆ ಯಾವುದೇ ಪ್ರಯೋಜನ ಆಗುವುದಿಲ್ಲ ಎಂದು ತೀರ್ಮಾನಿಸಿ ಅವರ ಕೋರಿಕೆಯನ್ನು ತಿರಸ್ಕರಿಸಲಾಯಿತು. ಅಭಿಯೋಜನೆಯ ಪರ ಸಾಕ್ಷ್ಯವನ್ನು ಮುಕ್ತಾಯಗೊಳಿಸಿತು.

**14.** ಈ ಪ್ರಕರಣದಲ್ಲಿ ಪ್ರಮುಖವೆಂದು ಹೇಳಲಾದ ವ್ಯಕ್ತಿಯು ಆರೋಪಿತನ ವಿರುದ್ಧ ಯಾವುದೇ ಸಾಕ್ಷ್ಯವನ್ನು ನುಡಿದಿರುವುದಿಲ್ಲವಾದ್ದರಿಂದ ಅಭಿಯೋಜನೆಯು ಈ ಪ್ರಕರಣದಲ್ಲಿ ಯಾವುದೇ ಹುರುಳು ಇಲ್ಲವೆಂದು ಸ್ಪಷ್ಟವಾಗಿ ಕಂಡು ಬರುತ್ತದೆ. ಆರೋಪಿತನ ವಿರುದ್ಧ ಹೊರಿಸಲಾದ ಆರೋಪಗಳು ಕೇವಲ ಆರೋಪಗಳಾಗಿಯೇ ಉಳಿಯುತ್ತವೇ ವಿನಃ ಯಾವುದೇ ಸಾಕ್ಷ್ಯಾಧಾರಗಳಿಂದ ರುಜುವಾತು ಆಗಿರುವುದಿಲ್ಲ.

**15.** ಆದ್ದರಿಂದ ಅಭಿಯೋಜನೆಯು ಆರೋಪಿತನ ವಿರುದ್ಧ ಆರೋಪಿಸಲಾದಂತಹ ಭಾರತೀಯ ದಂಡ ಸಂಹಿತೆಯ ಕಲಂ 341, 354(ಡಿ), 506,

509 ಮತ್ತು 67 ಐಟಿ ಆಕ್ಟ್ ರ ಅಪರಾಧವನ್ನು ಆರೋಪಿತನು ಮಾಡಿರುತ್ತಾರೆಂದು ರುಜುವಾತು ಪಡಿಸುವಲ್ಲಿ ಅಭಿಯೋಜನೆಯು ವಿಫಲವಾಗಿದೆ ಹಾಗೂ ಅಭಿಯೋಜನೆಯು ಆರೋಪಿತನ ಮೇಲಿನ ಅಪರಾಧವನ್ನು ಎಲ್ಲಾ ಸಂಶಯಾತೀತ ಕಾರಣಗಳಿಂದ ಹೊರತುಪಡಿಸಿ ರುಜುವಾತು ಪಡಿಸಬೇಕೆಂಬುದು ಕ್ರಿಮಿನಲ್ ನ್ಯಾಯಶಾಸ್ತ್ರದ ಸಾಮಾನ್ಯ ನಿಯಮವಾಗಿದ್ದು, ಈ ಪ್ರಕರಣದಲ್ಲಿ ಅಭಿಯೋಜನೆಯು ಆರೋಪಿತನ ವಿರುದ್ಧದ ಆರೋಪಗಳನ್ನು ರುಜುವಾತು ಪಡಿಸುವಲ್ಲಿ ವಿಫಲವಾಗಿರುವುದರಿಂದ ಮತ್ತು ಸಂಶಯದ ಲಾಭವನ್ನು ಆರೋಪಿತನಿಗೆ ಕೊಡಬೇಕಾಗಿರುವುದು ಸಾಮಾನ್ಯ ಕಾನೂನಿನ ತತ್ವವಾಗಿರುವುದರಿಂದ ಈ ಮೇಲಿನ **ಅಂಶ-1 ರಿಂದ 5 ಗಳನ್ನು ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

**16. ಅಂಶ-6:** ಅಂಶ-1ರಿಂದ 5 ರಲ್ಲಿ ಹೇಳಲಾದ ಕಾರಣಗಳಿಂದಾಗಿ, ಆರೋಪಿತರ ವಿರುದ್ಧ ಹೊರಿಸಲಾದ ಆರೋಪಗಳನ್ನು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಲು ವಿಫಲರಾಗಿರುವ ಕಾರಣ ಆರೋಪಿ ಬಿಡುಗಡೆಗೆ ಅರ್ಹರಿರುತ್ತಾರೆಂದು ಪರಿಗಣಿಸಿ, ಈ ಕೆಳಕಂಡಂತೆ ಆದೇಶವನ್ನು ಈ ನ್ಯಾಯಾಲಯ ಮಾಡುತ್ತದೆ.

**:ಆದೇಶ:**

ದಂಡ ಪ್ರಕ್ರಿಯಾ ಸಂಹಿತೆ 248(1) ರಡಿಯಲ್ಲಿ ಆರೋಪಿಯನ್ನು ಭಾರತೀಯ ದಂಡ ಸಂಹಿತೆಯ ಕಲಂ 341, 354(ಡಿ), 506, 509 ಮತ್ತು 67 ಐಟಿ ಆಕ್ಟ್ ರ ಆಪಾದನೆಗಳಿಂದ ದೋಷ ಮುಕ್ತಗೊಳಿಸಿ ಖುಲಾಸೆ ಮಾಡಲಾಗಿದೆ.

ಆರೋಪಿತನ ವೈಯುಕ್ತಿಕ ಬಂಧ ಪತ್ರ ಮತ್ತು ಜಾಮೀನುದಾರರ ಜಾಮೀನು ಮುಚ್ಚಳಿಕೆ ಪತ್ರಗಳನ್ನು ರದ್ದು ಪಡಿಸಲಾಗಿದೆ.

ಆರೋಪಿತನು ದಂಡ ಪ್ರಕ್ರಿಯಾ ಸಂಹಿತೆ ಕಲಂ. 437-A ರ ಅನುಸಾರ ₹50,000/- ಮೊತ್ತದ ವೈಯಕ್ತಿಕ ಬಂಧ ಪತ್ರ ಮತ್ತು ಸಮಾನ ಮೊತ್ತಕ್ಕೆ ಒಬ್ಬ ಜಾಮೀನುದಾರರೊಂದಿಗೆ ಜಾಮೀನುದಾರ ಬಂಧ ಪತ್ರ ಕೊಡತಕ್ಕದ್ದು. ಸದರಿ ಬಂಧ ಪತ್ರಗಳು ಇವತ್ತಿನಿಂದ 6 ತಿಂಗಳ ಅವಧಿಯವರೆಗೆ ಮಾನ್ಯವಾಗಿರುತ್ತವೆ.

*(ಶೀಘ್ರಲಿಪಿಗಾರರು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, ನಂತರ ಮುಕ್ತ ನ್ಯಾಯಾಲಯದಲ್ಲಿ ದಿನಾಂಕ* ***07 ಆಗಸ್ಟ್ 2026****ರಂದು ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು).*

**(ರವಿಪ್ರಕಾಶ್ ಟಿ ಆವಿನ್)**
**C/C 3ನೇ ಅಧಿಕ ಸಿವಿಲ್ ಜಡ್ಜ್ ಮತ್ತು**
**ಜೆ.ಎಂ.ಎಫ್.ಸಿ.,ಕನಕಪುರ.**

## ::ಅನುಬಂಧ::

**1. <u>ಅಭಿಯೋಜನಾ ಪರ ವಿಚಾರಣೆ ಮಾಡಲಾದ ಸಾಕ್ಷಿಗಳು:</u>**

ಪ್ರಾಸಾ-1 : ಸುಶ್ಮಿತಾ

**2. <u>ಅಭಿಯೋಜನಾ ಪರ ಹಾಜರು ಪಡಿಸಿದ ದಾಖಲೆಗಳು:</u>**

| | |
|---|---|
| ನಿಶಾನೆ ಪಿ-1 | : ದೂರು |
| ನಿಶಾನೆ ಪಿ-1(ಎ) | : ಪ್ರಾಸಾ-1 ರವರ ಸಹಿ |
| ನಿಶಾನೆ ಪಿ-2 | : ಪಂಚನಾಮೆ |
| ನಿಶಾನೆ ಪಿ-2(ಎ) | : ಪ್ರಾಸಾ-1 ರವರ ಸಹಿ |

3. ಆರೋಪಿ ಪರ ವಿಚಾರಣೆ  ಮಾಡಲಾದ ಸಾಕ್ಷಿಗಳುಃ
ಇಲ್ಲಾ
4. ಆರೋಪಿ ಪರ ಹಾಜರು ಪಡಿಸಿದ ದಾಖಲೆಗಳುಃ
ಇಲ್ಲಾ
5. ಸಾಕ್ಷಿ ಕಾಲಕ್ಕೆ ಗುರುತಿಸಲಾದ ಮುದ್ದೆಮಾಲುಗಳುಃ
ಇಲ್ಲಾ

RAVIPRAKASH TIPPANNA AVIN

Digitally signed by RAVIPRAKASH TIPPANNA AVIN
Date: 2026.08.10 15:32:40 +0530

(ರವಿಪ್ರಕಾಶ್ ಟಿ ಆವಿನ್)
C/c 3ನೇ ಅಧಿಕ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ.,ಕನಕಪುರ.